615

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಡಿ. ಕೃಷ್ಣಮೂರ್ತಿ, ಕೃಷಿ ಅಧಿಕಾರಿ, ಹಿಂದಿನ ಸಮಾಜ ಕಲ್ಯಾಣಾಧಿಕಾರಿ, ಕುಣಿಗಲ್, ಇವರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಯ ಬಗ್ಗೆ.

**ಓದಲಾಗಿದೆ:** 1)ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ತನಿಖೆ/ಬಿಡಿ-11/ಸಿಆರ್-8/2005/ಟಿಕೆಆರ್/,ದಿನಾಂಕ:03-01-2006.

2)ಸರ್ಕಾರದ ಆದೇಶ ಸಂಖ್ಯೆ :ಕೃಇ.87 ಕೃಪವಿ 2006, ದಿನಾಂಕ:03-04-2006

3)ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ:ಲೋಕ್/ಐಎನ್ ವಿ (ಜಿ)/ಬಿಡಿ-11/ಸಿಆರ್-8/2005/ಟಿಕೆಆರ್/, ದಿನಾಂಕ:02-02-2012.

----

**ಪ್ರಸ್ತಾವನೆ:**

ಶ್ರೀ ಡಿ.ಕೃಷ್ಣಮೂರ್ತಿ, ಕೃಷಿ ಅಧಿಕಾರಿ ಇವರು ಈ ಹಿಂದೆ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಯಾಗಿ ಕುಣಿಗಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಶ್ರೀ ಕುಮಾರ್ ಬಿನ್ ಚಿಕ್ಕಮಾರಯ್ಯ, ಜಿರಾಯಿಕೆಂಪನಹಳ್ಳಿ, ಹುತ್ತರಿದುರ್ಗ ಹೋಬಳಿ, (ಫಿರ್ಯಾದಿ) ಇವರ ಹೆಂಡತಿ ಶ್ರೀಮತಿ ಕೋಮಲರವರಿಗೆ ಪೆಟ್ಟಿಗೆ ಅಂಗಡಿ ನಡೆಸಲು ಮತ್ತು ಅವರ ಚಿಕ್ಕಮ್ಮ ಶ್ರೀಮತಿ ಗಂಗಮ್ಮ ಎಂಬುವವರಿಗೆ ಗಂಧದ ಕಡ್ಡಿ ತಯಾರಿಕೆ ಉದ್ಯೋಗ ನಡೆಸಲು ಹಾಗೂ ನೆಂಟರಾದ ಶ್ರೀಮತಿ ಜಯಲಕ್ಷ್ಮಮ್ಮನವರಿಗೂ ಸಹ ಸ್ವಂತ ಉದ್ಯೋಗ ನಡೆಸಲು ಸರ್ಕಾರದಿಂದ ಸಹಾಯಾಧನ ಕೋರಿ ಸಲ್ಲಿಸಿದ ಅರ್ಜಿಗೆ ಸಂಬಂಧಿದಂತೆ ಅವರುಗಳಿಗೆ ಸಹಾಯಾಧನ ಮಂಜೂರು ಮಾಡಲು ರೂ.4000/-ಗಳ ಅಕ್ರಮ ಸಂಭಾವನೆ ಪಡೆಯುತ್ತಿದ್ದಾಗ ಲೋಕಾಯುಕ್ತದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆಂದು ಬಂದ ವರದಿಯ ಮೇರೆಗೆ ಅವರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಿಕೊಂಡಿರುವುದಾಗಿ ವರದಿ ಮಾಡಿ, ಅವರನ್ನು ಸಕ್ಷಮ ನ್ಯಾಯಾಲಯದಲ್ಲಿಅಭಿಯೋಜನೆಗೆ ಗುರಿಪಡಿಸಲು ಅನುಮತಿಯನ್ನು ನೀಡುವಂತೆ ಮೇಲೆ ಕ್ರಮಾಂಕ(1)ರಲ್ಲಿ ಓದಲಾದ ದಿ:03-01-2006ರ ಪತ್ರದಲ್ಲಿ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಕೋರಿರುತ್ತಾರೆ.

ಕ್ರಮಾಂಕ (2)ರಲ್ಲಿ ಓದಲಾದ ದಿನಾಂಕ:03-04-2006ರ ಆದೇಶದಲ್ಲಿ ಶ್ರೀ ಡಿ. ಕೃಷ್ಣಮೂರ್ತಿ, ಕೃಷಿ ಅಧಿಕಾರಿ, ಹಿಂದಿನ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಕುಣಿಗಲ್‌ರವರನ್ನು ಲಂಚ ನಿರೋಧಕ ಕಾಯ್ದೆ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚ 13(2)ರ ಪ್ರಕಾರ ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಸದರಿ ಕಾಯ್ದೆಯ ಕಲಂ 19(1)(ಸಿ)ರಡಿಯಲ್ಲಿ ಅವರನ್ನು ಸಕ್ಷಮ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಗುರಿಪಡಿಸಲು ಅನುಮತಿಯನ್ನು ನೀಡಲಾಗಿರುತ್ತದೆ.

ಕ್ರಮಾಂಕ(3)ರಲ್ಲಿ 'ಓದಲಾದ ದಿನಾಂಕ:02-02-2012ರ ಪತ್ರದಲ್ಲಿ ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು, ಇವರು ಸದರಿ ಆದೇಶದ ಮೇರೆಗೆ ಅಭಿಯೋಜನೆಗೆ

..2

61

ಒಳಪಟ್ಟ ಶ್ರೀ ಡಿ. ಕೃಷ್ಣಮೂರ್ತಿ, ಇವರ ಮೇಲಿನ ಆರೋಪಗಳು ನ್ಯಾಯಾಲಯದಲ್ಲಿ ರುಜುವಾತು ಹಿನ್ನಲೆಯಲ್ಲಿ ಅವರ ಮೇಲೆ ಈ ಕೆಳಕಂಡಂತೆ ಕ್ರಮ ವಹಿಸಲು ಕೋರಿರುತ್ತಾರೆ.

ಪ್ರಕರಣದಲ್ಲಿ ವಿಚಾರಣೆ ಪೂರ್ಣಗೊಂಡ ನಂತರ ಘನ ನ್ಯಾಯಾಲಯವು ಆರೋಪಿತರನ್ನು ತಪ್ಪಿತಸ್ಥರೆಂದ ತೀರ್ಮಾನಿಸಿ, ಲಂಚ ನಿರೋಧ ಕಾಯ್ದೆ 1988ರ ಕಲಂ 7, 13(1)(ಡಿ) ಸಹವಾಚ 13(2) ರಡಿಯಲ್ಲಿ ಎಸಗಿದ ಶಿಕ್ಷಾರ್ಹ ಅಪರಾಧಗಳಿಗಾಗಿ ಕ್ರಮಗತವಾಗಿ ಅವರಿಗೆ ಮೂರು ವರ್ಷಗಳ ಕಠಿಣ ಸಜೆ ಮತ್ತು ರೂ.5000ಗಳ ದಂಡವನ್ನು ಹಾಗೂ 4 ವರ್ಷಗಳ ಕಠಿಣ ಸಜೆ ಮತ್ತು ರೂ.5000ಗಳ ದಂಡವನ್ನು ಪಾವತಿಸಲು ತೀರ್ಪು ನೀಡಿರುತ್ತದೆ. ಸದರಿ ದಂಡವನ್ನು ಪಾವತಿಸಲು ತಪ್ಪಿದ್ದಲ್ಲಿ ಕ್ರಮಗತವಾಗಿ 6 ತಿಂಗಳು ಮತ್ತು ಒಂದು ವರ್ಷ ಕಠಿಣ ಸಜೆಯನ್ನು ಅನುಭವಿಸತಕ್ಕದ್ದೆಂದು, ದಿನಾಂಕ:20-12-2011ರಂದು ನೀಡಿದ ತೀರ್ಪಿನಲ್ಲಿ ಆದೇಶಿಸಲಾಗಿರುತ್ತದ ಎಂಬುದಾಗಿಯೂ ವರದಿ ಮಾಡಿ ಸದರಿ ತೀರ್ಪಿನ ಹಿನ್ನಲೆಯಲ್ಲಿ ಭಾರತೀಯ ಸಂವಿಧಾನದ ಅನುಚ್ಛೇದ 311(2) ಪ್ರವರ್ಗ, ಮತ್ತು ಕೆ.ಸಿ.ಎಸ್.(ಸಿಸಿಎ) ನಿಯಮಾವಳಿಗಳು 1957ರ ನಿಯಮ 14 ಹಾಗೂ 10(2) ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 9 ಸೇಇವಿ 95, ದಿನಾಂಕ:26-06-1996 ರನ್ವಯ ಅವರನ್ನು ಸೇವೆಯಿಂದ ವಜಾಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮತ್ತು ಕೈಗೊಂಡ ಕ್ರಮದ ಬಗ್ಗೆ ಮಾಹಿತಿಯನ್ನು ಒದಗಿಸುವಂತೆ ಕೋರಿರುತ್ತಾರೆ.

ಅಪರ ಪೋಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಮೇಲ್ಕಂಡ ವರದಿಯನ್ನು ಪರಿಶೀಲಿಸಿದ ಸರ್ಕಾರ ಶ್ರೀ ಡಿ.ಕೃಷ್ಣಮೂರ್ತಿ, ಕೃಷಿ ಅಧಿಕಾರಿ, ಹಿಂದಿನ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಕುಣಿಗಲ್, ತುಮಕೂರು ಜಿಲ್ಲೆ ಇವರು ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅವರನ್ನು ಕರ್ನಾಟಕ ನಾಗರೀಕ ಸೇವಾ ನಿಯಾಮಾವಳಿ 1957ರ ನಿಯಮ 14(1)ರ ಅವಕಾಶದಂತೆ ಅದೇ ನಿಯಮಾವಳಿ ನಿಯಮ 8(VIII)ರಡಿಯಲ್ಲಿ ಅವರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ:ಕೃಇ 87 ಕೃಪವಿ 2005, ಬೆಂಗಳೂರು, ದಿನಾಂಕ:30-06-2012.</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನಲೆಯಲ್ಲಿ, ಶ್ರೀ ಡಿ.ಕೃಷ್ಣಮೂರ್ತಿ, ಕೃಷಿ ಅಧಿಕಾರಿ, ಹಿಂದಿನ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿ, ಕುಣಿಗಲ್, ತುಮಕೂರು ಜಿಲ್ಲೆ, ಇವರು ಎಸಗಿರುವ ಶಿಕ್ಷಾರ್ಹ ಅಪರಾಧಕ್ಕಾಗಿ ಅವರನ್ನು ಕರ್ನಾಟಕ ನಾಗರೀಕಾ ಸೇವಾ ನಿಯಾಮಾವಳಿ 1957ರ ನಿಯಮ 14(1)ರ ಅವಕಾಶದಂತೆ, ಅದೇ ನಿಯಮಾವಳಿಗಳ ನಿಯಮ 8(VIII)ರಡಿಯಲ್ಲಿ ಈ ಕೂಡಲೇ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ,

**<u>ಇವರಿಗೆ:-</u>**

1) ಮಹಾಲೇಖಪಾಲರು(ಲೆಕ್ಕಪತ್ರ ಲೆಕ್ಕ ತಪಾಸಣೆ) ಕರ್ನಾಟಕ, ಬೆಂಗಳೂರು,

613

2) ಅಪರ ಪೋಲಿಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

3) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು,

4) ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು,

5) ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ/ತುಮಕೂರು,

6) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ತುಮಕೂರು.

7) ಸರ್ಕಾರದ ಅಧೀನ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು,

8) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸ ಸೌಧ, ಬೆಂಗಳೂರು,

9) ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು,

10)ಸಂಬಂಧಪಟ್ಟ ಅಧಿಕಾರಿಯವರಿಗೆ(ಕೃಷಿ ಆಯುಕ್ತರ ಮುಖಾಂತರ)

11)ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಕೃಷಿ ಇಲಾಖೆ, ಬೆಂಗಳೂರು,

12) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.